ಕಡೂರು ಡಿಸ್ಟ್ರಿಕ್ಟು.
ಎಕ್ಸೈಜ್ ಡಿಪಾರ್ಟ್‌ಮೆಂಟ್.
1896ನೇ ಇಸವಿ ಏಪ್ರಿಲ್ 28ನೇ ಮಕ್ಕಂ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

1. ಈ ಕೆಳಗೆ ಕಂಡ ಕಡೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳ ಬಗಣಿ ಕೇಂದ ಉತಾರು ಮತ್ತು ಮೂರುವ ಹಕ್ಕು ಸ್ಯ1896ನೇ ಜುಲೈ ಗುರ್ತೇ ಲಾಗಾಯತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಯಾಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕ್ ಬಾಜಾರದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಆಯಾ ತಾಲ್ಲೂಕ್ ಕಛೇರಿ ರೂಬರೂ ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಅಥವಾ ಆಮಲ್ದಾರ್‌ರವರಿಂದಲಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ತಾಲ್ಲೂಕು.	ಹರಾಜು ತಾರೀಖ್.
1. ಚಿಕ್ಕಮಗಳೂರು	ಮೇ ತಿಂಗಳ 27ರ ಲಾಗಾಯಿತು 29ರವರಿಗೆ
2. ಮೂಡಿಗೆರೆ	ಡಿಟೋ 25 ಮತ್ತು 26ನೇ ತಾರೀಖುಗಳು.
3. ಕೊಪ್ಪ	ಜೂನ್ ತಿಂಗಳ 3ನೇ ತಾರೀಖು ಲಾಗಾಯಿತು 5ರವರಿಗೆ
4. ಯಡಿಯೂರು	ಜೂನ್ 6 ಮತ್ತು 7ನೇ ತಾರೀಖುಗಳು.

2. ಪ್ರತಿ ಬಂದು ಸರ್ಕಲ್ ಗುತ್ತಿಯು ಜಡದರ ಖಾಸ್ತುದಾರನಿಗೆ ಕೊಡಲ್ಪಡುವದು. ಸದರಿ ಜಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲ್ ಮೊಬಲಗ್ಯೆ ಕಮ್ಮಿ ಇರಕೂಡದು. ಈ ಹರಾಜು ಡಿಪ್ಯೂಟಿ ಕಮ್ಮಿಷನರವರ ಮಂಜೂರಿಗೆ ಒಳಪಟ್ಟು ಇರತಕ್ಕದ್ದಾಗಿ ಇರುತ್ತೆ. ಅಂಥಾ ಹರಾಜಿಗೆ ಸಮ್ಮಂಧಪಟ್ಟ ರಿಕಾರ್ಡುಗಳನ್ನು ಸದರಿಯವರು ಡಿಪ್ಯೂಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು. ಡಿಪ್ಯೂಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಜಡ ದರಖಾಸ್ತನ್ನಾದರೂ ಯಾವದೊಂದು ಕಾರಣವ್ನು ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

3. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು.

4. ಡಿಪ್ಯೂಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಜಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡಿಸತಕ್ಕ ಆಫೀಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು, ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್‌ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೋ ಆದರ ಹಸ್ನೆರಡರಲ್ಲಿ ಬಂದು ಭಾಗದ ಮೊಬಲಗು ಪಡೆದೆ ಡಿಪಾಜಿಟ್ ಮಾಡಬೇಕು. ಡೆಪ್ಯೂಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಮೊದಲು ಇಜೋಡಾದ ಶೇವಣಿ ದೇಖೀಲ್ ಸಾಲ್ ಗುತ್ತಿಗೆ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದಷ್ಟು ಮೊಬಲಗು ನಗದಾಗಿ ಯಾಗಲಿ ಅಥವಾ ಗವರ್ನ್‌ಮೆಂಟ್ ಪತ್ರಮೂಲಕವಾಗಿ ಯಾಗಲಿ ಅಮಲ್ದಾರ್‌ಲ್ಲಿ ಹಾಜರ್ ಮಾಡಬೇಕು. ಹಾಗೆ ಗವರ್ನ್‌ಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತೆಗಾಗಿ ಹಾಜರ್ಮಾಡಿಧೆಯಂದು ಸದರೀ ಪತ್ರ ಜೈಲ್ ಡೆಪ್ಯೂಟಿಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿ ಕೊಡತಕ್ಕದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗ್ಗಾಗಿ ಆರವಾನಿ ನಗದಾಗಿಯಾಗಲೀ ಅಥವಾ ಮೇಲ್ಕಂಡಂತೆ ಇಂಡಾರ್ಸ್‌ಮಾಡಿಕೊಟ್ಟ ಗವರ್ನ್‌ಮೆಂಟ್ ಪತ್ರಮೂಲಕವಾಗಿಯಾಗಲೀ ಬಾಕಿ 'ಅರ್ಧಭಾಗ ಸ್ಥಿರಸ್ವತ್ತು ಮೂಲಕ ಜಾಮೀನಿಕೊಡಬಹುದು. ಹಾಗೆ ಆಧಾರ ಮಾಡುವ ಸ್ಥಿರಸ್ವತ್ತಿನ ಬೆಲೆ ಜಾಮೀನಿ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು. ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಶೇವಣಿ ಇಟ್ಟ ಮೊಬಲಗು ಆಕೈರ್ ಮೂರು ತಿಂಗಳ ಖಿಸ್ತಿನ ಬಗ್ಯೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡೆಕೊಳ್ಳಲು ಬದ್ಧನಾಗಿರುತ್ತೆನೆಂತ ಕ್ರಮವಾದ ಸ್ಟ್ಯಾಂಪು ಕಾಗದದ ಮೇಲೆ ಮೂಮೂಲನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿರುತ್ತೆ.

5. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್‌ಮಾಡದೇ ತಪ್ಪಿದರೂ ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ ಪುರು ಹಾಜರ್ ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳಲ್ಪಡುತ್ತಲ್ಲದೆ ಬಾಬ್ ಪುನಃ ಹರಾಜುಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿ ಯಾಗಲೀ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಏನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು (ಜಮೀನು) ಕಂದಾಯದ ಬಾಕಿಯಂತೆ ಸದರಿಯವನ ಜಿಂದಗಿ ಜಪ್ತಿ ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲ್ಪಡುತ್ತೆ.

6. ಪ್ರತಿ ಒಬ್ಬ ಉತಾರದಾರನೂ ಎಕ್ಸೈಸ್ ಆಕ್ಟ್ 5ನೇ ಸೆಕ್ಷನ್ ಅನುಸರಿಸಿ ಡೆಪ್ಯೂಟಿ ಕಮ್ಮಿಷನರವರಿಂದ ವಂದು ಲೈಸೆನ್ಸು ಪಡಿಯತಕ್ಕದ್ದು.

7. ಸರ್ಕಾರಿಂದ ಲೈಸನ್ಸು ರೂಲ್ಸು ಮಂಜೂರಾಗುವ ವರಿಗೂ ಗುತ್ತಿಗೆದಾರನು ತನ್ನ ಫಿರ್ಕಾಕ್ಕೆ ಸಮ್ಮಂಧಪಟ್ಟ ಅಂಗಡಿಗಳಲ್ಲಿ ಸೇಂದಿ ಬಿಕರೀ ಬಗ್ಯೆ ಎಕ್ಸೈಜ್ ಆಕ್ಟ್ 16ನೇ ಸೆಕ್ಷನ್ ಪ್ರಕಾರ ಅಪ್ಪಣೆ ಚೀಟಿ ಕೊಡಬಹುದು.

8. ಈಚಲು ಕೇಂದಿ ಕಂಟ್ರಾಕ್ಟು ವಿಷಯದಲ್ಲಿ ಹಾಲಿ ಜಾರೀಲಿರುವ ಷರತ್ತುಗಳು ಈ ಬಗನಿ ಕೇಂದಿ ಇಜಾರೆ ಬಗ್ಯೂ ಅನ್ವಯಿಸಲ್ಪಡುತ್ತೆ.

9. ಹಿಂದಿನ ಸಾಲ್‌ಗಳ ಬಗನಿ ಕೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕ್ ಅಮಲ್ದಾರ್ರು ಅಥವಾ ಸಿರಸ್ತೇದಾರರಲ್ಲಿ ದರಖಾಸ್ತು ಕೊಟ್ಟು ತಿಳುಕೊಳ್ಳಬಹುದು.

10. ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಬಾಕಿ ಎಲ್ಲಾ ಸಂಗತಿಗಳು ಹರಾಜು ಮಾಡಿಸುವ ಆಫೀಸರಿಂದ ಹರಾಜು ಕಾಲದಲ್ಲಿ ತಿಳಿಸಲ್ಪಡುವದು.

ಎಚ್. ಎಚ್. ಸ್ಪರ್ಕ್ಸ್, ಡೆಪ್ಯೂಟಿ ಕಮ್ಮಿಷನರ್, ಕಡೂರ ಡಿಸ್ಟ್ರಿಕ್ಟು.

ಸ್ವಂತ ಪ್ರಕಟನೆ.

ನೋಟಿನ.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಕದ್ದೂರಲ್ಲಿರುವ ಯಜಮಾನರೇ ತಾಲ್ಲೂಕು ಮಾವತ್ತೂರು ವೆಂಕಟರಾಮಯ್ಯನವರ ಹೆಂಡತಿ ವೆಂಕಟಲಕ್ಷ್ಮಮ್ಮನು; ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ, ನಾನು ಮಂಡ್ಯದ ತಾಲ್ಲೂಕು ಸರ್ವಮಾನ್ಯ ಕೆಸ್ತೂರು, ಅಲ್ಲಿರುವ ಹರಿಯಣ್ಣಯ್ಯನ ನರಸಯ್ಯನವರ ಮಕ್ಕಳು ನರಸುಹ್ಮಯ್ಯನವರಿಗೆ, ನಾನು ಬರದುಕೊಟ್ಟಿರುವ 94ನೇ ಇಸವಿ ಆಕ್ಟೋಬರ್ 21ನೇ ಮಕ್ಕಂ ಜನರಲ್ ಪವರಾಫ್ ಅಟರ್ನಿ ಪೊಟ್ಟು ಮೊಕ್ತ್ಯಾರ್‌ನಾಮೆಯನ್ನು ನಾನು ರದ್ದುಪಡಿಸಿರುವದರಿಂದ ಈ ತಾರೀಖು ಲಾಗಾಯತು ಮುಂದೆ ನನಿಗೋಸ್ಕರ ಅವರಲ್ಲಿ ಯಾವವಿಧವಾವ ಲೇವಾದೇವಿ, ಲೆಕ್ಕಾಚಾರ ಮತ್ತು ಕಾಗದ ಪತ್ರಗಳನ್ನು ಇತರರು ನಡಿಸಕೂಡದು. ಹಾಗೆ ನಡಿಸಿದರೆ ಅದಕ್ಕೆ ನಾನು ಬದ್ಧಳಾಗಲಾರೆನಾದ ವಿವರ ತಿಳಿಯುವದು. ತಾರೀಖು 12—4—96.

ಓ ವೆಂಕಟಲಕ್ಷ್ಮಮ್ಮನ ಗುರುತಿನ ರುಜುವಿಗೆ ಕದಲೂರು ಕಾನಭೋಗ ವೆಂಕಟಸುಬ್ಬಯ್ಯನ ಬರಹ: